ಆ) ಹಾಗಿದ್ದಲ್ಲಿ ಸದರಿ ಪಶುವೈದ್ಯ ಶಾಲೆಗೆ ಸರ್ಕಾರಿ ಕಟ್ಟಡವನ್ನು ತ್ವರಿತವಾಗಿ ಒದಗಿಸಲಾಗುವುದೆ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

ಅ) ಬಂದಿದೆ.

ಆ) ಈ ಬಗ್ಗೆ ಬಳ್ಳಾರಿ ಜಿಲ್ಲಾ ಪರಿಷತ್ತಿನ ಮತಿಯಿಂದ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಪಂಪಾಪತಿ (ಶ್ರೀ ಯು. ಭೂಪತಿಯವರ ಪರವಾಗಿ).— ಸ್ವಾಮಿ, ಸಂಡೂರು ತಾಲೂಕು ಕೇಂದ್ರದಲ್ಲಿನ ಪಶುವೈದ್ಯಶಾಲೆಗೆ ಸರ್ಕಾರಿ ಕಟ್ಟಡ ಇಲ್ಲದಿರುವುದರಿಂದ ಬಹಳ ತೊಂದರೆಯಾಗಿದೆ. ಆದಷ್ಟು ಜಾಗ್ರತೆ ಜಿಲ್ಲಾಪರಿಷತ್ತಿನವರಿಗೆ ಹೇಳಿ ಈ ಕೆಲಸವನ್ನು ಇನ್ನು ಸಾಧ್ಯ ತೀಂಗಳಲ್ಲಿ ಪೂರೈಸಿ ಕೊಡುತ್ತೀರಿ? ಇದರ ಬಗ್ಗೆ ತಾವು ಒಂದು ಭರವಸೆಯನ್ನು ಕೊಡಬೇಕು.

ಶ್ರೀ ಸಿದ್ದರಾಮಯ್ಯ —ಪಶುವೈದ್ಯಶಾಲೆಗಳ ಕಟ್ಟಡಗಳನ್ನು ಕಟ್ಟಿಸುವ ಕೆಲಸವನ್ನು ಜಿಲ್ಲಾ ಪರಿಷತ್ತಿನವರು ಮಾಡುತ್ತಾರೆ. ಈಗಾಗಲೇ ಜಿಲ್ಲಾ ಪರಿಷತ್ತಿನವರು ಜಮೀನನ್ನು ಈ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ. ಆದಷ್ಟು ಬೇಗ ಕಟ್ಟಡವನ್ನು ಕಟ್ಟಿಸುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೇವೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ನಿಗಮ

೧೧೦೯. ಶ್ರೀ ಗೋಪಾಲ ಮುಕುಂದ ಕಾಣಜೆ (ಸಿರ್ಸಿ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ನಿಗಮಕ್ಕೆ ಸರ್ಕಾರದಿಂದ ಒದಗಿಸಿದ ಮೂಲ ಬಂಡವಾಳ ಎಷ್ಟು ?

ಆ) ೧೯೮೬–೮೭ ಹಾಗೂ ೧೯೮೭–೮೮ರಲ್ಲಿ ಸದರಿ ನಿಗಮವು ಗಳಿಸಿದ ಲಾಭವೆಷ್ಟು.

ಇ) ಲಾಭಗಳಿಸಿದ್ದಲ್ಲಿ, ಅದಕ್ಕೆ ಕಾರಣವೇನು, ಹಾಗೂ ಅದಕ್ಕೆ ಹೊಣೆ ಯಾರು ?

ಶ್ರೀ ಬಿ.ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಸರ್ಕಾರದಿಂದ ಒದಗಿಸಿದ ಮೂಲ ಬಂಡವಾಳ ೩೦–೬–೮೭ರಲ್ಲಿ ಇದ್ದಂತೆ ರೂ. ೮೦೦ ಲಕ್ಷಗಳು.

ಆ) ೧೯೮೬–೮೭ನೇ ಸಾಲಿನ ಲೆಕ್ಕಗಳು ಪೂರ್ಣಗೊಂಡಿದ್ದು ಮಾಹಾಲೇಖಪಾಲರಿಂದ ಪರಿಶೋಧನೆ ನಡೆಯುತ್ತಿದೆ, ನಿಗಮವು ೧೯೮೬–೮೭ನೇ ಸಾಲಿನಲ್ಲಿ ಲಾಭಗಳಿಸುವ ಸಾಧ್ಯತೆ ಇಲ್ಲ.

ನಿಗಮದ ಲೆಕ್ಕಪತ್ರಗಳ ವರ್ಷವು ಜುಲೈಯಿಂದ ಜೂನ್‌ವರೆಗೆ ಆದ್ದರಿಂದ ೧೯೮೭–೮೮ರ ಲೆಕ್ಕ ಪತ್ರಗಳ ವರ್ಷ ಮುಗಿದಿಲ್ಲ.

ಇ) ೧೯೮೬–೮೭ನೇ ಸಾಲಿಗೆ ನಿಗಮವು ಲಾಭ ಗಳಿಸುವ ಸಾಧ್ಯತೆ ಇಲ್ಲದಿರುವುದಕ್ಕೆ ಮುಖ್ಯ ಕಾರಣ ಗಳು.—

೧) ಒಳ್ಳೆಯ ಬೇಡಿಕೆ ಇದ್ದ ಕಚ್ಚಾ ಪಾಲುಗಳು ಸಾಕಷ್ಟು ನಿಗಮಕ್ಕೆ ಸರಬರಾಜು ಆಗಲಿಲ್ಲ. ಆದ್ದರಿಂದ ನಿಗಮವು ಕಚ್ಚಾ ಪಾಲುಗಳ ಪಹಿವಾಟುಗಳನ್ನು ಹೆಚ್ಚಿಗೆ ನಡೆಸಲು ಸಾಧ್ಯವಾಗಲಿಲ್ಲ.

೨) ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಇನ್ನಿತರ ಸ್ಥಳಗಳಲ್ಲಿ ನಿಗಮವು ನಿರ್ಮಿಸಿರುವ ಕೈಗಾರಿಕಾ ಮಳಿಗೆಗಳಿಗೆ ಬೇಡಿಕೆ ಇಲ್ಲದಿರುವುದರಿಂದ ಸಾಕಷ್ಟು ಮಳಿಗೆಗಳು ಖಾಲಿ ಇವೆ. ಈ ಕಾರಣ ದಿಂದ ನಿಗಮಕ್ಕೆ ಬರಬೇಕಾದ ಕಂತುಗಳು (ಬಡ್ಡಿಯನ್ನೊಳಗೊಂಡು) ಸಕಾಲದಲ್ಲಿ ಸಂದಾಯವಾಗುತ್ತಿಲ್ಲ. ಆದರೆ ನಿಗಮವು ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ ಬಡ್ಡಿಯನ್ನು ಕೊಡಬೇಕಾಗಿದೆ.

೪) ಪ್ರಕೃತಿ ವಿಕೋಪದ ಕಾರಣಗಳಿಂದಾಗಿ ವಿದ್ಯುತ್ ಆಭಾವ ಉಂಟಾಗಿ ಸಣ್ಣ ಕೈಗಾರಿಕಾ ಘಟಕಗಳು ಪೂರ್ಣ ಪ್ರಮಾಣದಲ್ಲಿ ಕೆಲಸ ನಡೆಸದ ಕಾರಣ ಅವುಗಳು ಸಾಕಷ್ಟು ಕಚ್ಚಾ ಮಾಲುಗಳನ್ನು ನಿಗಮದಿಂದ ಖರೀದಿಸಲಿಲ್ಲ ಮತ್ತು ಅವುಗಳು ನಿಗಮಕ್ಕೆ ಕೊಡಬೇಕಾದ ಬಾಡಿಗೆ ಹಾಗೂ ಕಂತುಗಳನ್ನು ನಿಗಮಕ್ಕೆ ಸಕಾಲದಲ್ಲಿ ಸಂದಾಯ ಮಾಡಲಿಲ್ಲ. ಮೇಲಿನ ಕಾರಣಗಳಿಂದ ಹೊಣೆಯ ಪ್ರಶ್ನೆ ಉದಭವಿಸುವುದಿಲ್ಲ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ೨ನೇ ಪ್ರಶ್ನೆಗೆ ಉತ್ತರವನ್ನು ಸ್ವಲ್ಪ ಸರಿಪಡಿಸಿಕೊಳ್ಳಬೇಕು ಉತ್ತರವನ್ನು ತಯಾರಿಸುವ ಸಂದರ್ಭದಲ್ಲಿ ಅಂಕಿ ಅಂಶ ಬಂದಿರಲಿಲ್ಲ. ಆದ್ದರಿಂದ ಇದನ್ನು ಸೇರಿಸಿಕೊಳ್ಳಬೇಕು. ೮೬-೮೭ನೇ ಇಸವಿಯಲ್ಲಿ ೬೧.೭೨ ಲಕ್ಷ ರೂಪಾಯಿಗಳ ನಷ್ಟವುಂಟಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ೧೯೮೬-೮೭ರಲ್ಲಿ ೬೧ ಲಕ್ಷ ಜಿಲ್ಲರೆ ಈ ನಿಗಮಕ್ಕೆ ನಷ್ಟವಾಗಿದೆ ಎಂದು ಹೇಳಿದ್ದೀರಿ. ೧೯೮೬-೮೭. ೧೯೮೭-೮೮ ಈ ವರ್ಷಗಳಲ್ಲಿ ಎಷ್ಟು ಬಂಡವಾಳ ಇತ್ತು ? ಮತ್ತು ಇದಕ್ಕೆ ಮೊದಲು ಎಷ್ಟು ಬಂಡವಾಳ ಇತ್ತು ? ಇಲ್ಲಿ ಖಾಲಿ ೬೧ ಲಕ್ಷ ಜಿಲ್ಲರೆ ಮಾತ್ರ. ನಷ್ಟವಾಗಿದೆಯೋ ಅಥವಾ ಇದಕ್ಕೂ ಹೆಚ್ಚಿಗೆ ನಷ್ಟವಾಗಿದೆಯೋ ? ತಾವು ಯಾವ ವರ್ಷದ ಅಂಕಿಅಂಶ ವನ್ನು ಇಲ್ಲಿ ಕೊಟ್ಟಿದ್ದೀರಿ ? ಎಷ್ಟು ಮಳಿಗೆಗಳು ಖಾಲಿ ಇವೆ ? ಯಾವ ಯಾವ ಊರುಗಳಲ್ಲಿ ಖಾಲಿ ಇವೆ. ವಿದ್ಯುತ್ ಅಭಾವದಿಂದಾಗಿ ಈ ಘಟಕಗಳು ಪೂರ್ಣ ಪ್ರಮಾಣದಲ್ಲಿ ಕೆಲಸ ನಡೆಸದ ಕಾರಣ ಅವುಗಳು ಸಾಕಷ್ಟು ಕಚ್ಚಾ ಮಾಲುಗಳನ್ನು ನಿಗಮದಿಂದ ಖರೀದಿಸಲಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ೧ ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಕೊಡುತ್ತೇವೆಂದು ನೀವು ಹಾಕಿಕೊಂಡ ಪಾಲಿಸಿ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಮೊದಲನೇ ಪ್ರಶ್ನೆಗೆ ಉತ್ತರ ಎಂದರೆ ಸರ್ಕಾರದಿಂದ ಒದಗಿಸಿದ ಮೂಲ ಬಂಡವಾಳ ೮೦೦.೮೬ ಲಕ್ಷ ರೂಪಾಯಿಗಳು. ಈಗ ಖಾಲಿ ಇರತಕ್ಕ ಷೆಡ್ಡುಗಳು ೪೨೪.

ಇನ್ನು ತಿಂಗಳಿಗೆ ೧ ಸಾವಿರ ಕೈಗಾರಿಕೆಗಳನ್ನು ಸ್ಥಾಪಿಸುವ ಪಾಲಿಸಿ ವಿಚಾರದಲ್ಲಿ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ೧೯೮೫ನೇ ಇಸವಿಯಿಂದ ಇದುವರೆಗೆ ಪ್ರತಿವರ್ಷವೂ ೧೨ ಸಾವಿರ ಸಣ್ಣ ಕೈಗಾರಿಕೆಗಳಂತೆ ಅನುಮತಿಯನ್ನು ಕೊಟ್ಟು ಸ್ಥಾಪಿಸಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ಈ ಲುಕ್ಸಾನು ಯಾರ ಕಾಲದಲ್ಲಿ ಆಯಿತು ? ಮತ್ತು ಈ ಲುಕ್ಸಾನು ಹೇಗೆ ಆಯಿತು ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ.ಎ ಜೀವಿಜಯ.—ಸ್ವಾಮಿ, ನನ್ನ ಉತ್ತರದಲ್ಲೇ ಸ್ಪಷ್ಟವಾಗಿ ಹೇಳಿದ್ದೇನೆ. "ಒಳ್ಳೆಯ ಬೇಡಿಕೆ ಇದ್ದ ಕಚ್ಚಾ ಮಾಲುಗಳು ಸಾಕಷ್ಟು ನಿಗಮಕ್ಕೆ ಸರಬರಾಜು ಆಗಲಿಲ್ಲ. ಸ್ಟೀಲ್ ಅಥಾರಿಟಿ ಆಫ್ ಇಂಡಿಯ ಏನಿದೆ ಅದಕ್ಕೆ ನಾವು ಸ್ಟೀಲ್‌ನ್ನು ಸರಬರಾಜು ಮಾಡುತ್ತೇವೆ ಅಷ್ಟು ಕಚ್ಚಾ ಮಾಲನ್ನು ಅವರು ನಮಗೆ ಕಳುಹಿಸಿಕೊಡಬೇಕು ಆದರೆ ಅವರು ಅಷ್ಟನ್ನು ಕೊಡಲಿಲ್ಲ. ಇಲ್ಲದೆ ಅವರು ಕೊಟ್ಟಿದ್ದನ್ನು ನಾವು ತೆಗೆದುಕೊಳ್ಳಬೇಕು. ಆದರೆ ಆ ಕಚ್ಚಾ ವಸ್ತುಗಳನ್ನು ನಾವು ತೆಗೆದುಕೊಂಡರೆ ಅದನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಇದರಿಂದಾಗಿ ಲುಕ್ಸಾನಾಗತಕ್ಕ ಪರಿಸ್ಥಿತಿ ಉದ್ಭವವಾಗಿದೆ. ಈಗ ಆಗಿರುವ ನಷ್ಟವನ್ನು ಪೈನಾನ್ಷಿಯಲ್ ಲಾಸ್ ಎಂದು ಹೇಳಬಹುದು. ನಮಗೆ ಇನ್‌ಸ್ಟಾಲ್‌ಮೆಂಟ್ ಹಣ ಬಾಕಿ ಇರುವುದು ೩ ಕೋಟಿ ೬೦ ಲಕ್ಷ ರೂಪಾಯಿಗಳು. ಮಳಿಗೆದಾರರಿಂದ ಒಡ್ಡಿರೂಪದಲ್ಲಿ ಒಂದು ಕೋಟಿ ರೂಪಾಯಿಗಳು ಬರಬೇಕಾಗಿದೆ. ಉತ್ತರದಲ್ಲಿಯೇ ಹೇಳಿದ್ದೇನೆ. ೪೩೨ ಶೆಡ್ಡ್‌ಗಳಿಗೆ ಇನ್‌ಸ್ಟಿಟ್ಯೂಷನ್ಸ್ ಫೈನಾನ್ಸ್ ಮಾಡಿದೆ ಎಂದು ಅದಕ್ಕೂ ಕೂಡ ಬಡ್ಡಿ ಬರಬೇಕಾದ್ದು ಅಕ್ಯುಮಿಲೇಟ್ ಆಗಿದೆ. ೪೩ ಲಕ್ಷ ರೂಪಾಯಿಗಳು ವಾಸ್ತವವಾಗಿ ಲಾಸ್ ಆಗಿರುವುದಿಲ್ಲ. ರಿಸರ್ವ್ ಮತ್ತು ಸರ್‌ಪ್ಲಸ್‌ನಲ್ಲಿ ೧ ಕೋಟಿ ೪೮ ಲಕ್ಷ ೬೯ ಸಾವಿರ ರೂಪಾಯಿಗಳು ಇವೆ. ಬಹುಶಃ ೬೧ ಲಕ್ಷ ನಷ್ಟವೆಂದರೂ ೮೭ ಲಕ್ಷ ರೂಪಾಯಿಗಳು ಬಾಕಿಬರಬೇಕಾದ್ದು ಇದೆ.